(SRI D. DEVARAJ URS)

know the correct position. Because, when firing takes place, I will not be there, nor the I. G. P. For example somebody just now alleged that the police have chased and killed some students. Even upto a distance of 5 furlongs. Five furlongs will be away from the town. That may be true or may not be true. Therefore, normally, where there is firing we have resorted to Magisterial Enquiry.

ಶ್ರೀ ಸಿ. ಬೈರೇಗೌಡ.—ಸ್ವಾಮಿ [illegible]ಕ್ಕಬಳ್ಳಾಪುರದ ಈ ಗಲಭೆಯಲ್ಲಿ ಸತ್ತವನಿಗೇನಾದರೂ ಕಾಂಪೆನ್ಸೇಷನ್ ಕೊಡುವುದನ್ನು ಆಲೋಚನೆ [illegible]ದ್ದೀರಾ ? ಕೆಲವರಿಗೆ ಗಾಯವಾಗಿದೆ ಎಂದು ತಾವು ಹೇಳಿದ್ದೀರಾ. ಸತ್ತವನನ್ನು ಬಿದ್ದಂಥ ಸ್ಥಳ [illegible] ಪೋಲೀಸಿನವರು ತೆಗೆದುಕೊಂಡು ಹೋಗಲಿಲ್ಲ. ಅವರ ಅಣ್ಣತಮ್ಮಂದಿರು ಬಂದು ತೆಗೆದುಕೊಂ[illegible]ಹೋಗಿದ್ದಾರೆ. ಪೋಲೀಸಿನವರು ಆತನನ್ನು ಸಾಯಿಸಿದ್ದರೂ ಕೂಡ ಮಾನವೀಯತೆಯ ದೃಷ್ಟಿಯಿಂದ [illegible]ದರೂ ಅವನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೇರಿಸಬೇಕಾಗಿತ್ತು. ಹಾಗೆ ಮಾಡಲಿಲ್ಲ. ಆದುದರಿಂದ ನಾನು ತಮ್ಮಲ್ಲಿ ಕೇಳುವುದು ಸತ್ತವನ ಕುಟುಂಬಕ್ಕೆ ಹಣ್ತು, ಈ ಗಲಭೆಯಲ್ಲಿ ಗಾಯವಾದವರಿಗೆ ಏನಾದರೂ ಕಾಂಪೆನ್ಸೇಷನ್ ಕೊಡುವುದನ್ನು ಆಲೋಚನೆ ಮಾಡುತ್ತೀರಾ ?

SRI D. DEVARAJ URS —That I will examine. Because, I cannot commit the Government to do this or that without examination. I would like to submit that whether this case is deserving or not has to be examined, I cannot say straight away. If there is any chance of giving help by the Government I won't hesitate to do it.

SRI H. D. DEVEGOWDA.—When there is death the Government will resort to hold Magisterial enquiry. Will you kindly once again verify whether there is any relevant provision to hold a Magisterial Enquiry under such circumstances ?

SRI D. DEVARAJ URS.—If I am wrong, I will correct it. So far as my information goes, I am right. Anyway, I will again verify and let the Hon. Member know the position later.

SRI B. B. SAYANAK.—When there is firing firstly, the firing should be in the air and shooting the persons comes only afterwards

(No Answer)

(ii) *re: acuto scarcity of Kerosen oil in the State*

SRI M. H. JAYAPRAKASH NARAYAN (Sirsi).—I Call the attention of the Minister for Food and Forests to the hardship caused to the public due to acute scarcity of kerosen in the State.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ, ಈ ಸಂಬಂಧವಾಗಿ ಹಳ್ಳಿಗಳಲ್ಲಿರುವ ಸೀಮೆಎಣ್ಣೆ ಅಭಾವದ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇದರಲ್ಲಿ ಪ್ರಶ್ನೆ ಕೇಳಬಹುದು.

ಶ್ರೀ ಕೆ. ಎಚ್. ಪಾಟೀಲ್ (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ನನ್ನ ಹೇಳಿಕೆ ಈ ಪ್ರಕಾರ ಇದೆ:—

ಬೆಂಗಳೂರು ನಗರದಲ್ಲಿ ನ್ಯಾಯಬೆಲೆ ಅಂಗಡಿಗಳು ಚಿಲ್ಲರೆ ಅಂಗಡಿಗಳು ಮತ್ತು ಕೈಗಾಡಿಯವರುಗಳ ಮುಖಾಂತರ ರೇಷನ್ ಕಾರ್ಡುದಾರರಿಗೆ ಸೀಮೆಎಣ್ಣೆಯ ಹಂಚಿಕೆಯನ್ನು ಪೂರೈಸಲಾಗುತ್ತಿತ್ತು. ಕಳೆದ ಕೆಲವು ತಿಂಗಳುಗಳಿಂದ ರಾಜ್ಯಕ್ಕೆ ಹಂಚಿಕೆ ಆಗುವ ಸೀಮೆಎಣ್ಣೆಯ ಪ್ರಮಾಣವು ಸುಮಾರು ಅರ್ಧದಷ್ಟು ಖೋತಾ ಆಗಿ, ರಾಜ್ಯದಲ್ಲಿ ಸೀಮೆಎಣ್ಣೆಯ ವಿತರಣೆಯ ಪ್ರಮಾಣ ಕಡಿಮೆಯಾಗಿದೆ.

ಕರ್ನಾಟಕ ರಾಜ್ಯಕ್ಕೆ ಪ್ರತಿ ತಿಂಗಳೂ ಸುಮಾರು ೨೦ ರಿಂದ ೨೫ ಸಾವಿರ ಮೆಟ್ರಿಕ್ ಟನ್‌ಗಳಷ್ಟು ಸೀಮೆಎಣ್ಣೆಯ ಅವಶ್ಯಕತೆ ಇದೆ. ನಮ್ಮ ರಾಜ್ಯಕ್ಕೆ ಸರಬರಾಜಾಗುವ ಪ್ರಮಾಣವನ್ನು ಕೇಂದ್ರ ಸರ್ಕಾರವು ನಿರ್ಧರಿಸಿ ದೇಶಿಯ ನಾಲ್ಕು ತೈಲ ಸರಬರಾಜು ಮಾಡುವ ಕಂಪನಿಗಳು ಪೂರೈಸಬೇಕಾಗಿರುವ ಪ್ರಮಾಣವನ್ನು ನಿರ್ಧರಿಸುತ್ತಾರೆ. ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಗೆ ಸರಬರಾಜಾಗಬೇಕಾದ ಸುಮಾರು ಶೇ ೯೦ ರಷ್ಟನ್ನು ಮದ್ರಾಸಿನಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ನಿನ ವಲಯ ಕಛೇರಿಯು ಪ್ರತಿ ಜಿಲ್ಲೆಯಲ್ಲೂ ಹಿಂದಿನವರ್ಷ ಸರಬರಾಜು ಮತ್ತು ವಿತರಣೆಯಾದ ಪ್ರಮಾಣದ ಆಧಾರದ ಮೇಲೆ ಪ್ರತಿ ಜಿಲ್ಲೆಗೂ ಒದಗಿಸಬೇಕಾದ ಪ್ರಮಾಣವನ್ನು ನಿರ್ಧರಿಸಿ ಹಂಚುವ ವ್ಯವಸ್ಥೆ ಇದೆ.

ವಿಶ್ವದ ಎಣ್ಣೆಯ ಮಾರುಕಟ್ಟೆಯಲ್ಲಿ ಉಂಟಾದ ಎಣ್ಣೆಯ ಬಿಕ್ಕಟ್ಟಿನಿಂದಲೂ ವಿದೇಶ ವಿನಿಮಯದ ಅಭಾವದಿಂದಲೂ ಎಣ್ಣೆಯ ಸರಬರಾಜು ಬೇಕಾಗಿರುವ ಪ್ರಮಾಣದಲ್ಲಿ ತಗಿಂದಾಗ್ಗೆ ಖೋತಾ ಆಗಿ ಕಳೆದ ವರ್ಷ ನಮ್ಮ ರಾಜ್ಯಕ್ಕೆ ಸರಬರಾಜಾದ ಪ್ರಮಾಣದ ಅರ್ಧದಷ್ಟು ಖೋತಾ ಆಗಿದೆ ಇದು ಈ ಕೆಳಗೆ ನಮೂದಿಸಿರುವ ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ.

ವರ್ಷ	ತಿಂಗಳು	ಸರಬರಾಜಾದ ಪ್ರಮಾಣ
(ಎ) ೧೯೭೩	ಜನವರಿ	೧೪,೯೨೨ ಮೆ ಟ (೨೨,೦೭೬ ಕಿ.ಲೀ.)
	ಫೆಬ್ರುವರಿ	೧೬,೫೯೩ ಮೆ.ಟ. (೧೯,೯೧೧ ಕಿ.ಲೀ.)
(ಬಿ) ೧೯೭೪	ಜನವರಿ	೯,೬೧೯ ಮೆ ಟ (೧೦,೫೪೨ ಕಿ.ಲೀ.)
	ಫೆಬ್ರುವರಿ	೧೦,೧೯೭ ಮೆ.ಟ, (೧೨,೨೩೬ ಕಿ.ಲೀ.)
(ಸಿ)	ಜುಲೈ	೯,೬೧೫ ಮೆ.ಟ. (೧೦,೫೩೦ ಕಿ.ಲೀ.)
	ಆಗಸ್ಟ್	೯,೫೪೬ ಮೆ.ಟ. (೧೦,೪೦೬ ಕಿ.ಲೀ.)

ಮೇಲಿಂಚೆ ತಿಳಿಸಿರುವಂತೆ ಮದ್ರಾಸಿನ ವಲಯ ಕಛೇರಿಯವರು ನಿರ್ಧರಿಸಿದ ಪ್ರಮಾಣದಲ್ಲಿ ಸರಬರಾಜು ಮಾಡುವ ಜವಾಬ್ದಾರಿಯು ತೈಲ ಕಂಪನಿಯವರಿಗೆ ಸೇರಿದ್ದು ರಾಜ್ಯದಲ್ಲಿ ಆಯಾಜಿಲ್ಲೆ ಮತ್ತು ಸಹಾಯಕ (ಪ್ರಾದೇಶಿಕ) ಅಧಿಕಾರಿಗಳು (ತೈಲ ಕಂಪನಿ) ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸರಬರಾಜು ಮಾಡಲಾಗುತ್ತಿದೆ,

ಬೆಂಗಳೂರು ನಗರದಲ್ಲಿ ಸರಬರಾಜಿನ ಖೋತಾ ಪ್ರಮಾಣವು ಕಳೆದ ಜೂನ್ ಮತ್ತು ಜುಲೈ ತಿಂಗಳಂ ತಡವಾಗಿ ಆದೇಶವು ಬಂದು, ಆ ವೇಳೆಗೆ ಆಗಲೇ ನಿರ್ದೇಶಿಸಿದ ಪ್ರಮಾಣಕ್ಕಿಂತ ಜಾಸ್ತಿ ಎಣ್ಣೆ ಸರಬರಾಜಾಗಿದ್ದುದ್ದರಿಂದ ಕೂಡಲೇ ಖೋತಾ ಮಾಡಲಾಗಿ ಸಾಕಷ್ಟು ಪ್ರಮಾಣದಲ್ಲಿ ವಿತರಣೆ ಮಾಡಲಾಗಿಲ್ಲ. ಈ ರೀತಿ ಉಂಟಾದ ತೊಂದರೆಯನ್ನು ನಿವಾರಿಸಲು ಮತ್ತು ನಗರದಲ್ಲಿ ಆಗಬೇಕಾಗಿರುವ ಪ್ರಮಾಣವನ್ನು ಸರಿದೂಗಿಸಲು ಮತ್ತು ತಿಂಗಳ ಕೊನೆಯಲ್ಲಿ ಅಭಾವ ಕಾಣದಿರಲೆಂದು ತೈಲ ಕಂಪನಿಯವರೊಡನೆ ಸಮಾಲೋಚಿಸಿ ಪ್ರತಿ ರೇಷನ್ ಕಾರ್ಡುದಾರರಿಗೆ ತಿಂಗಳಿಗೆ ಮೂರು ಕಂತಿನಲ್ಲಿ ಒಟ್ಟು ೬ ಲೀಟರ್ ಎಣ್ಣೆಯನ್ನು ವಿತರಣೆ ಮಾಡಲು ಕ್ರಮ ತೆಗೆದು ಕೊಂಡಿರುವುದರಿಂದ ಕೂಲಿಗಾರರಿಗಾಗಲಿ ಅಥವಾ ಇನ್ನಿತರ ವರ್ಗದವರಿಗಾಗಲಿ ತೊಂದರೆ ಆಗುವುದೆಂದೂ ಎಣಿಸುವುದಿಲ್ಲ.

ಈಗ ಕೈಗಾಡಿಯವರು ಮತ್ತು ಚಿಲ್ಲರೆ ವರ್ತಕರು (ಸೀಮೆಎಣ್ಣೆ) ಕಳೆದ ಎರಡು ತಿಂಗಳಿಂದ ಸೀಮೆಎಣ್ಣೆಯ ಸಗಟು ವ್ಯಾಪಾರಿಗಳು ಭಾರತೀಯ ಎಕ್ಸ್‌ಪ್ಲೊಸೀವ್ ಕಾಯಿದೆ ಕಾನೂನಿನ ಪ್ರಕಾರ ನೆಲ ಮಾಳಿಗೆಯಿಂದ ವಿತರಣ ಆಗಬೇಕೆಂದು ತೈಲ ಕಂಪನಿಯವರು ಆದೇಶ ನೀಡಿರುವುದರಿಂದ ಚಿಲ್ಲರೆ ವರ್ತಕರು ತಮಗೆ ಮೊದಲಿನಂತೆಯೇ ಅವರೂ ವ್ಯಾಪಾರ ಮಾಡುವ ಜಾಗದಲ್ಲಿ ಸರಬರಾಜು ಆಗಬೇಕೆಂದು ಕಾಲ ಕಾಲಕ್ಕೆ ಚಿಲ್ಲರೆ ವರ್ತಕರು ಸರಿಯಾಗಿ ಎಣ್ಣೆಯನ್ನು ಎತ್ತದೆ ಇರುವುದರಿಂದ ವಿತರಣೆಯಲ್ಲಿ ವಿಳಂಬವಾಗುತ್ತಿದೆ. ಇಂಥ ಸಂದರ್ಭದಲ್ಲಿ ಕೈಗಾಡಿಯವರ ಮುಖಾಂತರ ನ್ಯಾಯ ಬೆಲೆಯ ಅಂಗಡಿಯಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡಲು ಸಾಧ್ಯವಾದಷ್ಟು ಮಟ್ಟಿಗೆ ಕಳಿಸಲಾಗುತ್ತಿದೆ. ಈ ವ್ಯವಸ್ಥೆಯಿಂದ ವಿತರಣ ವ್ಯವಸ್ಥೆ ಸುಧಾರಿಸಿ ಮಾಮೂಲಿನ ಪರಿಸ್ಥಿತಿಗೆ ಬರಂತ್ತಿದೆ.

ರಾಜ್ಯದ ಪ್ರತಿ ಜಿಲ್ಲೆಗೂ ಸರಬರಾಜಾಗುವ ಪ್ರಮಾಣವು ಮದರಾಸಿನಲ್ಲಿರುವ ವಲಯ ಕಛೇರಿಯು ನಿರ್ಧರಿಸಿ ಜಿಲ್ಲಾವಾರಾಗಿ ನಿರ್ಧರಿಸುತ್ತಾರೆ ಆಯಾ ಜಿಲ್ಲೆಯಲ್ಲಿರುವ ವಿತರಣ ಆಗಬೇಕಾದ ಎಣ್ಣೆಯ ಬೆಲೆಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳೇ ನಿರ್ಧರಿಸುತ್ತಾರೆ. ಮತ್ತು ಆ ಬೆಲೆಯನ್ನು ಸಗಟು ಮತ್ತು

(ಶ್ರೀ ಕೆ. ಹೆಚ್. ಪಾಟೀಲ್)

ಚಿಲ್ಲರೆ ವ್ಯಾಪಾರಿಗಳು ಅನುಸರಿಸಿ ಮಾರಬೇಕಾಗಿದೆ. ಸ್ಥಳೀಯ ಸ್ಥಿತಿಗತಿಗಳನ್ನು ಅನುಸರಿಸಿ ವಿತರಣೆ ಬಗ್ಗೆ ಆಗಾಗ್ಗೆ ಸೂಕ್ತ ಆದೇಶ ನೀಡಿ ವಿತರಣೆ ಮಾಡುವ ವ್ಯವಸ್ಥೆಯು ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿದೆ. ಮಾರಾಟದ ವ್ಯವಸ್ಥೆಯಲ್ಲಿ ನ್ಯೂನತೆ ಕಂಡುಬಂದಲ್ಲಿ ಮತ್ತು ನಿಗದಿಯಾದ ಬೆಲೆಯಲ್ಲಿ ಮಾರದೆ ಇರುವ ಪ್ರಕರಣಗಳು ಗಮನಕ್ಕೆ ಬಂದಲ್ಲಿ ಪ್ರಕರಣಗಳಲ್ಲಿ ಸ್ಥಳೀಯ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತಾರೆ ನಿಗದಿಯಾದ ಬೆಲೆಗಿಂತ ಜಾಸ್ತಿ ಬೆಲೆಗೆ ಮಾರಿದ ಪ್ರಕರಣಗಳು ಸಾಕಷ್ಟು ಸಾಕ್ಷಿಗಳು ಮುಂದೆ ಬಂದಲ್ಲಿ ಸಂಬಂಧಪಟ್ಟ ಮಾಡಿ ಪ್ರಕರಣಗಳನ್ನು ದಾಖಲೆ ಮಾಡಿ ಪೋಲೀಸಿನವರಿಗೆ ವಹಿಸಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ನಡೆಯಬೇಕಾದ ವಿತರಣೆ ವ್ಯವಸ್ಥೆಯು ಜಿಲ್ಲಾಧಿಕಾರಿಗಳು ಮತ್ತು ಇನ್ನಿತರ ಸಹಾಯಕ ಅಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿದ್ದು. ಈ ಸಂಬಂಧದಲ್ಲಿ ಸ್ಥಳೀಯ ಅಧಿಕಾರಿಗಳು ಕಾಲಕ್ಕಿತಿಗನುಗುಣವಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಈ ಬಗ್ಗೆ ಆಹಾರ ಸರಬರಾಜು ಮತ್ತು ನಿತ್ಯ ಪೂರೈಕೆಯ ನಿರ್ದೇಶಕರು ಜೂನ್ ತಿಂಗಳಲ್ಲಿಯೇ ಒಂದು ಸುತ್ತೋಲೆಯ ಮೂಲಕ ಮುಂದೆ ಸಂಬಂಧಿಸಬಹುದಾದ ಖೋತಾ ಪ್ರಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ. ಸ್ಥಳೀಯ ಸ್ಥಿತಿಗತಿಗಳಿಗನುಗುಣವಾಗಿ ಸರಬರಾಜು ಮತ್ತು ಪೂರೈಕೆ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳು ಮಾರ್ಪಾಡು ಮಾಡಲು ಅಧಿಕಾರ ಹೊಂದಿರುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ರಾಜ್ಯಕ್ಕೆ ಒದಗಿಸತಕ್ಕಂಥ ಸೀಮೆ ಎಣ್ಣೆ ಮೊತ್ತವು ಕಡಿಮೆಯಾಗಿರುವುದರಿಂದ ಬೆಂಗಳೂರು ನಗರದಲ್ಲಿ ಒಂದು ಕಾರ್ಡಿಗೆ ೬ ಲೀಟರ್ ಎಂದು ಹಂಚುತ್ತಿರುತ್ತಾರೆ. ಅದರಲ್ಲಿ ಒಂದು ಕಾರ್ಡಿನಲ್ಲಿ ಇಬ್ಬರು ಇದ್ದರೂ ಅವರಿಗೂ ೬ ಲೀಟರು. ಒಂದು ಕಾರ್ಡಿನಲ್ಲಿ ೧೦ ಜನರು ಇದ್ದರೂ ಅವರಿಗೂ ಕೂಡ ೬ ಲೀಟರು ಎಂದು ಹುಚಿದರೆ ಅದು ಸರಿಯಾಗುತ್ತದೆಯೇ ಎಂಬುದನ್ನು ಯೋಚನೆಮಾಡಿ ತಿಳಿಸಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಮಾನ್ಯ ಮಂತ್ರಿಗಳು ಅರಣ್ಯ ಸಚಿವರೂ ಆಗಿರುವುದರಿಂದ ಇನ್ನು ಸೌದೆ ಬೆಲೆ ಟನ್ನಿಗೆ ೨೨೦ ರೂಪಾಯಿ ಆಗಿದೆ ಇಜ್ಜಿಲಿನ ಬೆಲೆಯೂ ಕೂಡ ಜಾಸ್ತಿಯಾಗಿರುವುದರಿಂದ ಸಾಮಾನ್ಯವಾಗಿ ಜನರೆಲ್ಲರೂ ಸೀಮೆ ಎಣ್ಣೆಯನ್ನು ಉಪಯೋಗಿಸುವುದರಿಂದ ಹೆಚ್ಚು ತೊಂದರೆಯಾಗಿರುವುದರಿಂದ ಇದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಚಿಮ್ಮಿನ ಎಣ್ಣೆಯನ್ನು ೬ ಲೀಟರು ಕಡಿಮೆ ಪ್ರಮಾಣದಲ್ಲಿ ಒಂದು ಕಾರ್ಡಿಗೆ ಹಂಚುವುದು ಅದು ಕೇವಲ ಲೈಟ್ ಹಚ್ಚುವುದಕ್ಕೆ ಎನ್ನುವುದು ದೃಷ್ಟಿಯಿಂದ ಕೊಡುತ್ತಿರುವುದು ಅದು ಬಿಟ್ಟು ತಲಾವಾರು ಸೀಮೆ ಎಣ್ಣೆ ಕೊಡಲಿಕ್ಕೆ ಸಾಧ್ಯವಿಲ್ಲ. ಆದರೆ ತೀವ್ರದಲ್ಲಿ ಪರಿಸ್ಥಿತಿ ಸುಧಾರಿಸುತ್ತದೆ ಎನ್ನುವ ಆಶೆ ಇದೆ, ವಿಶ್ವದ ತೈಲ ಸಂಸ್ಥೆಗಳಲ್ಲಿ ಪ್ರೊಡಕ್ಷನ್ ಹೆಚ್ಚಾಗಿರುವುದರಿಂದ ಬೆಲೆಯೂ ಕೂಡ ಸುಧಾರಿಸುತ್ತದೆ ಎನ್ನುವ ಭರವಸೆ ಇದೆ.

ಶ್ರೀ ಎಚ್. ಡಿ. ದೇವೇಗೌಡ —ತಾಪು ಆಯಿಲ್ ಕಾರ್ಪೊರೇಷನ್ ರಚಿಸುವುದರಿಂದ ಪರಿಸ್ಥಿತಿ ಸುಧಾರಿಸುತ್ತದೆಂದು ಹೇಳುತ್ತೀರಾ ? ಡಿಫರೆಂಟ್ ಸ್ಟೇಟ್ಸ್‌ಗೆ ಅಲಾಟ್‌ಮೆಂಟ್ ಕೊಡುತ್ತಿದ್ದಾರೆ. ಅದನ್ನು ಅಲಾಟ್ ಮಾಡುವಾಗ ಯಾವುದಾದರೂ ಒಂದು ಆಧಾರ ಇಟ್ಟುಕೊಂಡು ಆಗಾಗ ಪಾಪುಲೇಷನ್ ಬೇಸಿಸ್ ಲೆಕ್ಕ ಹಾಕಿ ಹಂಚಿದ್ದಾರಾ ? ಅಥವಾ ವಸೂಲಿ ಬಾಜಿ ಕೆಲಸ ಮಾಡಬೇಕಾಗುತ್ತದೆಯೋ ಹೇಳಿ ?

ಶ್ರೀ ಕೆ. ಎಚ್. ಪಾಟೀಲ್.—ಮೊದಲು ನಮಗೆ ೯ ಸಾವಿರದ ಒಂದು ನೂರು ಟನ್‌ಗಳಷ್ಟು ಕೊಡುತ್ತಿದ್ದರು. ಅದರಲ್ಲಿ ಪುನಃ ಸ್ವಲ್ಪ ಹೆಚ್ಚು ಮಾಡಿದರು ವಿತರ್ಕೆಯಿದರೆ ಎಲೆಕ್ಟ್ರಿಸಿಟಿ ಖೋತಾ ಆಗಿದೆ ಯೆಂದು ಈಗ ೧೦ ಸಾವಿರ ಟನ್ ಕೊಟ್ಟಿದ್ದಾರೆ. ನಮಗೆ ಈಗ ಸುಮಾರು ೧೩ ಸಾವಿರ ಟನ್ ಬೇಕಾಗಿದೆ. ೨೦ ಸಾವಿರ್ಟನ್ ಸೀಮೆ ಎಣ್ಣೆ ನಮಗೆ ದೊರೆತರೆ ಜನತೆಯನ್ನು ಸಮಾಧಾನದಿಂದ ಸುಧಾರಿಸಬಹುದೆಂದು ನಾನು ಕೆಂದ್ರ ಸರ್ಕಾರಕ್ಕೆ ತಿಳಿಸಿದ್ದೇನೆ. ಆದರೂ ೧೦ ಸಾವಿರ ಟನ್ ಬಂತು. ಅದರಿಂದ ನಮಗೆ ಹೆಚ್ಚು ಖೋತಾ ಆಗಿದೆಯೆಂದು ಜನರು ಹೇಳುತ್ತಿದ್ದಾರೆ ಇದರ ಸರಿಯಾದ ಕಾರಣವನ್ನು ತಿಳಿಯಲು ಅಲ್ಲಲ್ಲಿ ಅಡ್ಡಾಡಿ ನೋಡಿದೆ. ಅದರಿಂದ ನನಗೆ ಗೊತ್ತಾಗಿರುವ ಪ್ರಕಾರ ಸೀಮೆ ಎಣ್ಣೆ ಹಂಚುವ ಅಂಗಡಿಯವನು ಸುಮಾರು ೪ ಗಂಟೆಯಿಂದ ೬ ಗಂಟೆಯೊಳಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳಿ ಜನರಿಗೆ ಆ ವೇಳೆಯಲ್ಲಿ ಬರಲಿಕ್ಕೆ ಆಗದೆ ಇದ್ದರೆ ಸೀಮೆ ಎಣ್ಣೆ ಸಿಕ್ಕುತ್ತಿಲ್ಲವೆಂದು ಗಾಬರಿಯಾಗಿದ್ದಾರೆ. ಈ ಗಾಬರಿಗೆ ಕಾರಣರು ಯಾರು ಎಂದರೆ ಅಂಗಡಿಯವ ಮತ್ತು ಗಾಡಿಯವ ಅದಕ್ಕೋಸ್ಕರ ಈ ಆರ್ಟಿಫಿಷ

ಯಲ್ ಸ್ಕೇರ್ಸಿಟಿಯನ್ನು ತಪ್ಪಿಸಲಿಕ್ಕೆ ನಮ್ಮ ಅಧಿಕಾರಿಗಳನ್ನು ಕರೆದು ಸ್ಪಷ್ಟವಾದ ಸಲಹೆಯನ್ನು ಕೊಟ್ಟಿದ್ದೇನೆ. ಸದಾ ಕಾಲ ಸೀಮೆ ಎಣ್ಣೆಯನ್ನು ಹಂಚುವ ವ್ಯವಸ್ಥೆ ಮಾಡಿದರೆ ಈ ಆರ್ಟಿಫಿಷಿಯಲ್ ಸ್ಕೇರ್ಸಿಟಿ ಕಡಿಮೆಯಾಗುತ್ತದೆ. ಇನ್ನು ಮಾನ್ಯ ಸದಸ್ಯರು ಕಟ್ಟಿಗೆಯ ವಿಷಯವಾಗಿ ಕೇಳಿದರು ಅದಕ್ಕೆ ಕಾರಣ ಇಷ್ಟು ದಿನೇ ದಿನೇ ಅರಣ್ಯ ಕಡಿಮೆಯಾಗುತ್ತಿರುವುದರಿಂದ. ಈಗ ಗೊಬರ್ಗಾಸ್ ಎಂದು ದನದ ಸಗಣಿಯಿಂದ ಉತ್ಪಾದಿಸುವ ಗ್ಯಾಸನ್ನು ತಯಾರು ಮಾಡಿದರೆ ಅದರಿಂದ ದೀಪ ಉರಿಸಲಿಕ್ಕೂ ಮತ್ತು ಬೆಂಕಿ ಹಚ್ಚಲಿಕ್ಕೂ ಆಗುತ್ತದೆ. ಅದನ್ನು ಮಾನ್ಯ ಸದಸ್ಯರು ಪ್ರಚಾರಮಾಡಿ ಅದರ ಉತ್ಪಾದನೆಯನ್ನು ಜನರು ಜಾಸ್ತಿಮಾಡಿದರೆ ಸೀಮೆ ಎಣ್ಣೆ ಅವಶ್ಯಕತೆ ಹೆಚ್ಚು ಬರುವುದಿಲ್ಲ.

2-30 P.M.

ಶ್ರೀ ಕೆ.ಎಚ್. ಹನುಮೇಗೌಡ.—ಸೀಮೇಎಣ್ಣೆ ವಿತರಣೆ ಸರಿಯಾಗಿ ಆಗುತ್ತಿದೆ ಎಂದು ತಾವು ಏನು ಈಗತಾನೆ ಅಪ್ಪಣೆ ಕೊಡಿಸಿದ್ದೀರಿ, ಅದು ವ್ಯವಸ್ಥಿತವಾದ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ವಿತರಣೆಯಾಗುತ್ತಿಲ್ಲ. ಕೆಲವು ಕಡೆ ಸಂತೆಗಳಲ್ಲಿ ಒಂದು ಲೀಟರ್ ಸೀಮೆ ಎಣ್ಣೆಗೆ ಒಂದು ರೂಪಾಯಿನಿಂದ ಮೂರು ರೂಪಾಯಿಗಳವರೆಗೆ ಮಾರಾಟ ಮಾಡುತ್ತಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಕೊಟ್ಟರೆ ಏನೂ ಪ್ರಯೋಜನವಾಗಿಲ್ಲ. ಅವರು ದುಡ್ಡನ್ನು ಹಂಚಿಕೊಳ್ಳುತ್ತಾರೆ. ಎರಡನೆಯದಾಗಿ, ಹಾಸನ ಟೌನ್‌ನಲ್ಲಿ ಕೈಗಾಡಿ ನೂಕಿಕೊಂಡು ಹೋಗುತ್ತಿರುವವರಿಂದ ನಿರ್ದಿಷ್ಟ ಲೀಟರ್ ಸೀಮೆ ಎಣ್ಣೆಯನ್ನು ತೆಗೆದುಕೊಂಡರೆ ಮನೆಗೆ ಹೋಗಿ ಅದನ್ನು ಪುನಃ ಅಳತೆ ಮಾಡಿದರೆ, ಅದು ೬ ಲೀಟರ್ ಬರುತ್ತದೆ, ಇದನ್ನು ನಾನೂ ಕಣ್ಣಾರೆ ಕಂಡಿದ್ದೇನೆ. ನಿಮ್ಮ ಅಧಿಕಾರಿಗಳ ಪರೋಕ್ಷವಾದ ಸಹಾಯದಿಂದ ಈ ರೀತಿಯಾಗುತ್ತಿದೆ. ಇಂಥ ಉದಾಹರಣೆಗಳು ಪೇಪರ್‌ನಲ್ಲಿ ಬಂದಿವೆ, ಸಂಬಧಪಟ್ಟ ಅಧಿಕಾರಿಗಳಿಗೆ ನೂರು ಆರ್ಜಿಗಳನ್ನು ಕೊಟ್ಟಿದ್ದರೂ ಏನ ಪ್ರಯೋಜನವಾಗಿಲ್ಲ. ಇದನ್ನು ಸರಿಪಡಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎಲ್ಲಿ ಸೀಮೆ ಎಣ್ಣೆಯ ಅಭಾವ ಇರುತ್ತದ್ಯೋ ಅಲ್ಲಿ ಸ್ವಾಭಾವಿಕವಾಗಿ ಜನತೆಯಲ್ಲಿ ಆತುರತೆ ಹೆಚ್ಚಾಗುತ್ತದೆ. ಹೆಚ್ಚಾದಂತೆ, ಹೇಗಾದರೂ ಮಾಡಿ ಸೀಮೆ ಎಣ್ಣೆಯನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿ ಜನರಿಗೆ ಇರುವಾಗ ಕರಪ್ಷನ್ ಬರುತ್ತದೆ. ಏನೂ ಕರಪ್ಷನ್ ಇಲ್ಲ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಸದಸ್ಯರು ಇಂಥ ವಿಷಯಗಳನ್ನು, ಅವರಿಗೆ ತಿಳಿದ ಕೂಡಲೆ ನನ್ನ ನಜರಿಗೆ ತಂದರೆ ಕೂಡಲೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಸರ್ಕಾರದಿಂದ ಇತ್ತೀಚೆಗೆ ಒಂದು ನಿರ್ದೇಶನ ಹೊರ ಬಂದಿದೆ ಏನೆಂದರೆ, ಸೀಮೆ ಎಣ್ಣೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಸಂತೆಗಳಲ್ಲಿ ಮಾರಾಟ ಮಾಡಬೇಕು ಎಂದು. ಇದಕ್ಕೆ ಮೊದಲು ಒಂದು ವ್ಯವಸ್ಥೆ ಏನು ಇತ್ತು ಎಂದರೆ, ಪಂಚಾಯತಿಗಳವರು, ಸೊಸೈಟಿಗಳವರು ಮತ್ತು ಫೇರ್‌ಪ್ರೈಸ್ ಡಿಪೋಗಳವರು ಮಾರಾಟಮಾಡತಕ್ಕ ಒಂದು ವ್ಯವಸ್ಥೆ ಇತ್ತು. ಇತ್ತೀಚೆಗೆ ಸರ್ಕಾರದವರು ಹಾಕರ್ಸ್‌ಗಳನ್ನು ಇಟ್ಟು ಬಜಾರ್‌ನಲ್ಲಿ ಮಾರಾಟಮಾಡಬೇಕು ಎಂದು ಹೇಳಿದ್ದಾರೆ ಒಂದೊಂದು ತಾಲ್ಲೂಕಿನಲ್ಲಿ ಸುಮಾರು ಎರಡು ಮೂರು ಪಂಚಾಯತಿಗಳು ಇರುತ್ತವೆ. ಕೆಲವು ಕಡೆ ವಾರದಲ್ಲಿ ಎರಡು ಸಂತೆ ನಡೆಯಬಹುದು, ಹಾಕರ್ಸ್ ಇಟ್ಟುಕೊಂಡು ಸೀಮೆ ಎಣ್ಣೆಯನ್ನು ಮಾರಾಟಮಾಡ ಬೇಕು ಎಂದರೆ ಬಹಳ ತೊಂದರೆಯಾಗುತ್ತದೆ. ಏಕೆ ತಾವು ಇಂಥ ನಿರ್ದೇಶನ ಕೊಟ್ಟಿರೋ ಗೊತ್ತಾಗುವುದಿಲ್ಲ. ಹಳೆಯ ಪದ್ಧತಿಯಂತೆ ಮಾರಾಟ ಮಾಡುವುದು ಯೋಗ್ಯ ಎಂದು ಕಾಣುತ್ತದೆ, ಆದ್ದರಿಂದ ಮಾನ್ಯ ಸಚಿವರು ಆ ರೀತಿ ಡೈರೆಕ್ಷನ್ಸ್ ಕೊಟ್ಟರೆ ಸೂಕ್ತ ಮತ್ತು ಯೋಗ್ಯ

ಶ್ರೀ ಕೆ.ಎಚ್. ಪಾಟೀಲ್. ಮಾನ್ಯ ವಿರೋಧಪಕ್ಷದ ನಾಯಕರು ತಿಳಿಸಿದ ಸಂತ್ತೋಲೆಯನ್ನು ನಾವು ಕೊಟ್ಟಿಲ್ಲ, ಯಾವ ಆದೇಶಗಳನ್ನು ನಾವು ಕೊಟ್ಟಿಲ್ಲ. ಎಲ್ಲಿಯಾದರೂ ಸ್ಥಾನಿಕ ಪರಿಸ್ಥಿತಿಗನುಸಾರವಾಗಿ ಆ ರೀತಿ ಮಾಡಿರಬಹುದು. ಆ ರೀತಿ ಮಾಡಬಾರದು ಎಂದು ಆದೇಶ ಕೊಡುತ್ತೇನೆ. ನನ್ನ ಅಭಿಪ್ರಾಯವು ಸರ್ಕಾರ ಪ್ರತಿಯೊಬ್ಬರಿಗೂ ಸೀಮೆ ಎಣ್ಣೆ ಸಿಗುವಂಥ ವ್ಯವಸ್ಥೆಯಾಗಬೇಕು. ಸೀಮೆ ಎಣ್ಣೆ ಸಿಕ್ಕುತ್ತಿಲ್ಲ, ಸಿಕ್ಕುತ್ತಿಲ್ಲ ಎನ್ನುವ ಹಾಹಾಕಾರದಿಂದ ಇಂಥ ಪರಿಸ್ಥಿತಿಯನ್ನು ತಂದು ಹಾಕುತ್ತಾರೆ. ಈ ಸದನದ ಮುಖಾಂತರ ತಿಳಿಸುತ್ತೇನೆ, ಸೀಮೆ ಎಣ್ಣೆಯ ಕೊರತೆ ನಮಗೆ ಇಲ್ಲ, ಆರ್ಟಿಫಿಷಿಯಲ್ ಕೊರತೆಯಾಗಿದೆ. ಬ್ಲಾಕ್‌ಮಾರ್ಕೆಟ್ ಮಾರುವವರು ಮತ್ತೆಷ್ಟು ಹೆಚ್ಚು ಕೊರತೆಯನ್ನು ಮಾಡುತ್ತಿದ್ದಾರೆ. ನಾನು ಈಗಾಗಲೇ ಪ್ರತಿಯೊಬ್ಬರಿಗೂ ಕೊಡತಕ್ಕ ಪೂರ್ಣ ಎಣ್ಣೆಯನ್ನು ಕಾಯ್ದಿಡಬೇಕು, ಎಂದು ಹೇಳಿದ್ದೇನೆ. ಅಲ್ಲದೆ ಮಾನ್ಯ ವಿರೋಧಪಕ್ಷದ ನಾಯಕರ ಸಲಹೆಯನ್ನು ಗಮನಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಶಾಮಣ್ಣನವರು ಸೀಮೆ ಎಣ್ಣೆ ಮತ್ತು ಕಬ್ಬಿಗೆಯ ಬಗ್ಗೆ ಹೇಳಿದ್ದಾರೆ. ಸಾಧಾರಣವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಸೌದೆಯನ್ನು ಬಳಕುತ್ತಾರೆ ಎಂದು ತಾವು ತಿಳಿದುಕೊಂಡಿರಬಹುದು. ನನಗೆ ಗೊತ್ತಿರುವ ಹಾಗೆ, ನಮ್ಮ ಪಟ್ಟಣದಲ್ಲಿ ಸೀಮೆ ಎಣೆ ಯನ್ನು ಜನರು ಹೆಚ್ಚಾಗಿ ಬಳಸುತ್ತಾರೆ. ತಾವು ಅಧಿಕಾರಕ್ಕೆ ಬಂದಮೇಲೆ, ಶಿವಮೊಗ್ಗದಲ್ಲಿ ಸೌದೆಯೂ ಸಿಕ್ಕುತ್ತಿಲ್ಲ. ಎರಡನೆಯದಾಗಿ, ಮಾನ್ಯ ಸದಸ್ಯರಾದ ಹನುಮೇಗೌಡರು, ೬ ಲೀಟರ್ ಸೀಮೆ ಎಣ್ಣೆ ತೆಗೆದು ಕೊಂಡರೆ, ೩–೪ ಲೀಟರ್ ಬರುತ್ತದೆ ಎನ್ನುವ ವಿಷಯವನ್ನು ತಿಳಿಸಿದ್ದಾರೆ. ನಾನು ಆ ಮಾದವನ್ನು ಒಪ್ಪುವುದಿಲ್ಲ. ಆರು ಲೀಟರ್ ಎಣ್ಣೆಯನ್ನು ತೆಗೆದುಕೊಂಡು ಹೋದರೆ ಆರು ಲೀಟರ್ ಬರುತ್ತದೆ, ಆದಕೆ ಅದರಲ್ಲಿ ಅರ್ಧಕ್ಕರ್ಧ ನೀರು ಇರುತ್ತದೆ. ಮಾನ್ಯ ಸಚಿವರು ಇಂಥ ನಿದರ್ಶನ ಯಾವುದಾದರೂ ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ನಾನು ನೋಡುತ್ತೇನೆಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ನೇರವಾಗಿ ಕೇಳುತ್ತೇನೆ, ಎಲ್ಲಾ ಬಡವರು ಮಾನ್ಯ ಸಚಿವರಿಗೆ ಪತ್ರವನ್ನು ಬರೆದು ತಿಳಿಸುವುದಕ್ಕೆ ಸಾಧ್ಯವೇ ಎಂದು, ತಮಗೆ ಸಿಬ್ಬಂದಿ ಇದೆ, ಅಧಿಕಾರ ಇದೆ, ಇಂಥ ಕಲಬೆರಕೆ ಎಣ್ಣೆಯನ್ನು ಮಾರುವುದನ್ನು ನಿಲ್ಲಿಸಬೇಕು. ಒಂದು ಬಾಟಲಿ ಎಣ್ಣೆಯನ್ನು ತಂದರೆ, ಎಣ್ಣೆ ಒಂದು ಭಾಗ, ನೀರು ಒಂದು ಭಾಗವಾಗಿರುತ್ತದೆ. ಇದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರ ಎಂದು ತಿಳಿಸಬೇಕು.

ಶ್ರೀ ಕೆ ಎಚ್. ಪಾಟೀಲ್.—ನಾನು ಮಾನ್ಯ ಸದಸ್ಯರು ನನಗೆ ಪತ್ರ ಬರೆಯಬೇಕು ಎಂದು ಕಡ್ಡಾಯ ಮಾಡಲಿಲ್ಲ. ನನ್ನ ಕೆಲಸ ಏನು ಎಷ್ಟು ವುದು ನನಗೆ ಗೊತ್ತಿದೆ. ಮಾನ್ಯ ಸದಸ್ಯರು ನಮ್ಮ ಸಿಬ್ಬಂದಿಯಲ್ಲಿ ಕೆಟ್ಟವರು ಇದ್ದಾರೆಂದು ಅಪಾದನೆ ಮಾಡುವಾಗ ಅದು ನನ್ನ ಗಮನಕ್ಕೆ ಬಾರದೆ ಇದ್ದರೆ, ನಾನು ಮೂರು ಕೋಟಿ ಜನರನ್ನು ಹೋಗಿ ದರ್ಶನ ಮಾಡುವುದಕ್ಕೆ ಸಾಧ್ಯವೇ ? ಮಾನ್ಯ ಸದಸ್ಯರು ಗಳು ಇಚ್ಛೆಪಟ್ಟರೆ, ಸಮಾಜವನ್ನು ಸುಧಾರಣೆ ಮಾಡಬಯಸಿದರೆ, ಕರಪ್ಷನ್ ಅನ್ನು ಕಡಿಮೆ ಮಾಡ ಬಯಸಿದರೆ, ಅಕ್ರಮವಾಗಿ ಕೆಲಸ ಮಾಡುವವರನ್ನು ಶಿಕ್ಷಿಸಲು ನನ್ನ ಕೈ ಬಲಪಡಿಸಬೇಕು ಎನ್ನುವ ಇಚ್ಛೆ ಇದ್ದರೆ ಅವರು ನನಗೆ ಆ ದೂರುಗಳನ್ನು ತಿಳಿಸಲಿ. ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ಮಾನ್ಯ ಬಂಗಾರಪ್ಪನವರು ನೀರು, ಎಣ್ಣೆ ಕೂಡಿಸಿ ಮಾರಾಟ ಮಾಡುವುದನ್ನು ತಿಳಿಸಿದ್ದಾರೆ. ನೀರು ಯಾವ ರೀತಿ ಎಣ್ಣೆಯಲ್ಲಿ ಕೂಡುತ್ತದೆಯೋ ನನಗೆ ಗೊತ್ತಿಲ್ಲ. ಆ ರೀತಿ ಮಾಡಿದ್ದೇ ಆದರೆ, ನೀರು ಕೆಳಗೆ ಬರುತ್ತದೆ, ಎಣ್ಣೆ ಮೇಲೆ ಬರುತ್ತದೆ. ಎಣ್ಣೆಯೊಳಗೆ ನೀರು ಕೂಡಿಸುವುದನ್ನು ಹೊಸದಾಗಿ ಕಲಿಯಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ತಮ್ಮ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದೇನೆ, ನನ್ನ ನಿಲುವಳಿ ಸೂಚನೆ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ಗಳಿಗೆ ಸಂಬಂಧಪಟ್ಟಿರತಕ್ಕುದು. Because it has appeared in the press that the Government of India has directed all the State Governments in our country to levy more taxes on the people.

ಜನತೆಯು ಮೇಲೆ ಹೆಚ್ಚಿನ ತೆರಿಗೆಯನ್ನು ಹೊರಿಸಬೇಕು. ಆದ್ದರಿಂದ ಎಲ್ಲಾ ರಾಜ್ಯಸರ್ಕಾರಗಳು ಇದನ್ನು ಫಾಲೋ ಮಾಡಬೇಕು ಎಂದು ತಿಳಿಸಿದ್ದಾರೆ.

ಅಧ್ಯಕ್ಷರು.—ಈಗ ಹಣಕಾಸಿನ ಮಂತ್ರಿಗಳು ಇಲ್ಲ, ನಾಳೆ, ಈ ವಿಷಯವನ್ನು ಮಾನ್ಯ ಸದಸ್ಯರು ಹೇಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಒಂದು ಹಕ್ಕುಚ್ಯುತಿ ಸಂಬಂಧದಲ್ಲಿ ತಮ್ಮ ಅನುಮತಿ ಗೋಸ್ಕರ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ಶ್ರೀಮಾನ್ ಕೌಜಲಗಿಯವರ ಮೇಲೆ ಸಭೆಯ ಹಕ್ಕುಚ್ಯುತಿ ಆರೋಪವನ್ನು ಹೊರಿಸತಕ್ಕದ್ದರ ಬಗ್ಗೆ ಅದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೇನೆ. ಇದರ ಬಗ್ಗೆ ತಾವು ಅತಿ ಜರೂರಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿ ಬರುತ್ತದೆ.

MADAM SPEAKER.—I will get it examined.

SRI. H. D. DEVEGOWDA.—He has to function both as a Member and as a Minister. My contention is that he cannot sit as a Member f this House.

MADAM SPEAKER.—I will take it up on friday.

INCREASE IN RATE OF FERTILIZERS.

ಶ್ರೀ ಕೋಣಂದೂರು ಲಿಂಗಪ್ಪ —ನಾನೊಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇನೆ. ಸಮಾಜವಾದಿ ಸರಕಾರ ಎಂಬುದು ಬರೀ ಘೋಷಣೆಯಾಗಿದೆ, ಇದು ಪರ್ತಕವಾದಿ ಸಮಾಜ ನೀತಿಯಾಗಿದೆ, ಸರಕಾರ ಇದನ್ನು ಅನುಸರಿಸುತ್ತಿದೆ.

ಅಧ್ಯಕ್ಷರು —ಅದನ್ನು ನೋಡಿದೆ. ಅದು ನಮ್ಮ ಸರಕಾರಕ್ಕೆ ಸಂಬಂಧಪಡುವುದಿಲ್ಲ ಮತ್ತು ಅದು ನಿಲುವಳಿ ಸೂಚನೆಯಾಗುವುದಕ್ಕೆ ಸಹ ಅವಕಾಶವಿಲ್ಲ. ಕೇಂದ್ರ ಸರಕಾರ ಗೊಬ್ಬರದ ಧಾರಣೆ ಜಾಸ್ತಿ ಮಾಡಿದರೆ ಅದು ಈ ಸರಕಾರಕ್ಕೆ ಸಂಬಂಧಪಡುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಶ್ರೀ ಲಿಂಗಪ್ಪನವರ ನಿಲುವಳಿ ಸೂಚನೆಯನ್ನು ಮಾನ್ಯ ಅಧ್ಯಕ್ಷರು ಸ್ವಲ್ಪ ಸಹಾನುಭೂತಿಯಿಂದ ಪರಿಶೀಲಿಸಬೇಕು ಈ ವಿಷಯ ಕೇಂದ್ರ ಸರಕಾರದ ಪರಿಮಿತಿಗೆ ಬರುತ್ತದೆಂದು ತಳ್ಳಿಹಾಕಬಾರದು, ಕಾರಣ ಕೇಂದ್ರದವರು ಬೆಲೆ ಜಾಸ್ತಿ ಮಾಡಿದ್ದಾರೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ, ಅವರು ಒಂದು ಸೀಲಿಂಗ್ ಫಿಕ್ಸ್ ಮಾಡಿದ್ದಾರೆ. ಅದರೊಳಗೆ ಮಾರುವಂತೆ ರಾಜ್ಯ ಸರಕಾರಕ್ಕೆ ತಿಳಿಸಿದ್ದಾರೆ. ಹಳೆಯ ದರದಲ್ಲಿ ಮಾರಬಾರದೆಂದು ಕೇಂದ್ರ ಸರಕಾರ ಹೇಳಿಲ್ಲ, ಗವರ್ನಮೆಂಟ್ ಆರ್ಡರು ನನ್ನ ಬಳಿ ಇದೆ, ಕೊಡುತ್ತೇನೆ. ಆದುದರಿಂದ ಲಿಂಗಪ್ಪನವರು ತಂದಿರುವ ನಿಲುವಳಿ ಸೂಚನೆಯನ್ನು ತಾವು ಸಹಾನುಭೂತಿಯಿಂದ ಪರಿಶೀಲಿಸಲು ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಚರ್ಚೆಗೆ ಅವಕಾಶ ಕೊಟ್ಟರೆ ಎಲ್ಲಾ ವಿಷಯಗಳನ್ನೂ ಹೇಳಲು ತಯಾರಾಗಿದ್ದೇವೆ.

The State Government has got its discretionary power to sell the old stock as per the old rate according to the Government of India itself.

ಅಧ್ಯಕ್ಷರು —ನನಗೆ ಗೊತ್ತಿರುವ ಮಟ್ಟಿಗೆ ಇದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿರುವ ವಿಷಯ.

I will convert this into a Call-attention motion. The Minister may make a statement explaining the position.

ಶ್ರೀ ಎಚ್.ಡಿ. ದೇವೇಗೌಡ.—ಈಗ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಹೊರಟಿದ್ದಾರೆ. ಈ ಹಣ ಕೇಂದ್ರ ಸರಕಾರದ ಖಜಾನೆಗೂ ಹೋಗಿಲ್ಲ, ರಾಜ್ಯ ಸರಕಾರದ ಖಜಾನೆಗೂ ಹೋಗಿಲ್ಲ. ಇದರ ಬಗ್ಗೆ ಪುನರ್ವಿಮರ್ಶೆ ಮಾಡಬೇಕು ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಕಾರಣ ಇಷ್ಟೆ, ಹಳೆಯ ಬೆಲೆಗೆ ಮಾರುವುದಕ್ಕೆ ಸರಕಾರಕ್ಕೆ ಯಾವ ತೊಂದರೆಯೂ ಇರಲಿಲ್ಲ.

ಅಧ್ಯಕ್ಷರು.—ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುವರು.

ಶ್ರೀ ಕೋಣಂದೂರು ಲಿಂಗಪ್ಪ.—ರೈತರಿಗೆ ಬೇಸಾಯ ಮಾಡುವುದಕ್ಕಾಗಿತೆರುವ ದುರ್ಭರ ಪರಿಸ್ಥಿತಿಯಿದೆ, ರೈತರು ಬಹಳ ಕಳವಳಕ್ಕೀಡಾಗಿದ್ದಾರೆ.

ಶ್ರೀ ಎಚ್ ಡಿ ದೇವೇಗೌಡ.—ತಮಗೂ ವೇದನೆಯಾಗಿದೆ, ಆ ಸ್ಥಾನದಲ್ಲಿರುವುದರಿಂದ ತಾವೇನೂ ಹೇಳುವಂತಿಲ್ಲ. ಈಗ ಬೆಲೆ ೧೯೦೦ ರೂಪಾಯಿ ಮಾಡಿದ್ದಾರೆ.

Karnataka Irrigation (Levy of Betterment Contribution and water Rate) (Amendment) Bill—1974, Introduction.

MADAM SPEAKR I have received the recommendation of the Governor for the introduction of the Karnataka Irrigation (Levy of Betterment contribution and water Rate) (Amendment) Bill, 1974 under clause 1 of Article 207 of the Constitution of India.